ಆ) ಮೆ: ಅಲ್ಫಾ ಎಂಟರ್‌ಟೈನ್‌ಮೆಂಟ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, ಇವರನ್ನು ಮಾರಾಟಕ್ಕೆ ಏಜೆಂಟರೆಂದು ನೇಮಕಾತಿ ಮಾಡಲಾಗಿದೆ. ಆನ್‌ಲೈನ್ ಲಾಟರಿಯಿಂದ ಮುಂದಿನ 5 ವರ್ಷಗಳಲ್ಲಿ ಈ ಕೆಳಕಂಡಂತೆ ಸರ್ಕಾರಕ್ಕೆ ನಿವ್ವಳ ಆದಾಯ ಬರುವ ನಿರೀಕ್ಷೆ ಇದೆ.

1ನೇ ವರ್ಷ: ರೂ. 100 ಕೋಟಿ ಅಥವಾ ಮಾರಾಟದ ಶೇಕಡ 21 ಇವುಗಳಲ್ಲಿ ಯಾವುದು ಹೆಚ್ಚೋ ಅದು.

2ನೇ ವರ್ಷ: ರೂ. 140 ಕೋಟಿ ಅಥವಾ ಮಾರಾಟದ ಶೇಕಡ 22 ಇವುಗಳಲ್ಲಿ ಯಾವುದು ಹೆಚ್ಚೋ ಅದು

3ನೇ ವರ್ಷ : ರೂ. 196 ಕೋಟಿ ಅಥವಾ ಮಾರಾಟದ ಶೇಕಡ 23.50 ಇವುಗಳಲ್ಲಿ ಯಾವುದು ಹೆಚ್ಚೋ ಅದು.

4ನೇ ವರ್ಷ: ರೂ. 275 ಕೋಟಿ ಅಥವಾ ಮಾರಾಟದ ಶೇಕಡ 24 ಇವುಗಳಲ್ಲಿ ಯಾವುದು ಹೆಚ್ಚೋ ಅದು.

5ನೇ ವರ್ಷ: ರೂ. 385 ಕೋಟಿ ಅಥವಾ ಮಾರಾಟದ ಶೇಕಡ 24.5 ಇವುಗಳಲ್ಲಿ ಯಾವುದು ಹೆಚ್ಚೋ ಅದು.

ಇ) ಇಲ್ಲ. "ಟಾಷಿ ಡಿಲೆಕ್ ಗೇಮಿಂಗ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, "ಇವರು ಸಿಕ್ಕಿಂ ರಾಜ್ಯದ ಆನ್‌ಲೈನ್ ಲಾಟರಿಯನ್ನು ಮಾರಾಟ ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯವು ಮೆ:ಅಲ್ಫಾ ಎಂಟರ್‌ಟೈನ್‌ಮೆಂಟ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, ಇವರನ್ನು ಗಣಕೀಕೃತ ನೆಟ್‌ವರ್ಕ್ ಲಾಟರಿ ಟಿಕೇಟ್ ಮಾರಾಟಕ್ಕಾಗಿ ಮಾರುಕಟ್ಟೆ ಏಜೆಂಟರೆಂದು ನೇಮಿಸಿದೆ.

ಈ) ಇಲ್ಲ.

ಬೆಂಗಳೂರು ಜಯನಗರದ ಕಾಸ್ಮಾಪಾಲಿಟಿನ್ ಕ್ಲಬ್‌ಗೆ ಬೆಂಗಳೂರು ಮಹಾನಗರ ಪಾಲಿಕೆ ಜಾಗವನ್ನು ವಾಪಸ್ಸು ಪಡೆಯುವುದು.

334(204) - ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಯನಗರ ಕಾಸ್ಮಾಪಾಲಿಟಿನ್ ಕ್ಲಬ್‌ಗೆ ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆ ಆಧಾರದ ಮೇಲೆ ನೀಡಿದ್ದ ಜಾಗವೆಷ್ಟು?

ಆ) ಈ ಗುತ್ತಿಗೆ ಅವಧಿ ಯಾವಾಗ ಪೂರ್ಣಗೊಂಡಿದೆ:

ಇ) ಗುತ್ತಿಗೆ ಅವಧಿ ಪೂರ್ಣಗೊಂಡಿದ್ದರೂ ಸಹ ಈ ಜಾಗವನ್ನು ಬೆಂಗಳೂರು ಮಹಾನಗರ ಪಾಲಿಕೆ ತನ್ನ ವಶಕ್ಕೆ ತೆಗೆದುಕೊಳ್ಳದೇ ಇರಲು ಕಾರಣಗಳೇನು?

ಈ) ಈ ಜಾಗದಲ್ಲಿ ಖಾಸಗಿ ಕ್ಲಬ್ ಆಡಳಿತ ಕಛೇರಿ ಹಾಗೂ ಇತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಜಾಗವನ್ನು ರಕ್ಷಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಈ ಅಜಾಗರೂಕತೆಗೆ ಯಾರು ಕಾರಣರು ಮತ್ತು ಅವರ ಮೇಲೆ ಕೈಗೊಂಡಿರುವ ಶಿಸ್ತು ಕ್ರಮ ಏನು?

ಊ) ಈ ರೀತಿ ಕಾಣೆಯಾದ ಶಸ್ತ್ರಾಸ್ತ್ರಗಳು ಮಂಗಳೂರು ಮತ್ತು ಪುಣೆಯಲ್ಲಿ ಮಾರಾಟವಾಗಿರುವುದು ನಿಜವೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

ಅ) 947 ಚದರ ಗಜಗಳು.

ಆ) 28-12-1988 ಕ್ಕೆ ಗುತ್ತಿಗೆ ಅವಧಿ ಮುಗಿದಿರುತ್ತದೆ.

ಇ) ಗುತ್ತಿಗೆ ನವೀಕರಿಸಲು ಕಾಸ್ಮೋಪಾಲಿಟಿನ್ ಕ್ಲಬ್‌ನವರು ಅರ್ಜಿ ಸಲ್ಲಿಸಿದ್ದು ಈ ಜಾಗ ತ್ರಿಕೋಣಾಕಾರದಲ್ಲಿದ್ದು ನಗರ ಪಾಲಿಕೆಯ ಉಪಯೋಗಕ್ಕೆ ಬಾರದೇ ಇದ್ದುದರಿಂದ ಈ ಜಾಗವನ್ನು ಕ್ರಯಕ್ಕೆ ಪಡೆಯಲು ಸಲಹೆ ಮಾಡಿ ಪ್ರಸಕ್ತ ಮಾರುಕಟ್ಟೆ ದರದಲ್ಲಿ ಕ್ರಯಕ್ಕೆ ನೀಡಲು ಬೆಂಗಳೂರು ಮಹಾ ನಗರ ಪಾಲಿಕೆ ಸಭೆಯ ಮುಂದೆ ಪ್ರಸ್ತಾವನೆ ಮಂಡಿಸಿದೆ. ಕಾಲಕಾಲಕ್ಕೆ ಗುತ್ತಿಗೆ ಹಣ ಪಾವತಿ ಮಾಡುತ್ತಿದ್ದಾರೆ.

ಈ) ಗುತ್ತಿಗೆ ನೀಡಿರುವ ಜಾಗದಲ್ಲಿ ಯಾವುದೇ ಕಟ್ಟಡ ನಿರ್ಮಾಣ ಆಗಿಲ್ಲ.

ಉ) ಸದರಿ ಜಾಗವು ನಗರ ಪಾಲಿಕೆಗೆ ಉಪಯೋಗಕ್ಕೆ ಬಾರದಿರುವ ಕಾರಣ ಅದನ್ನು ಪ್ರಸಕ್ತ ಮಾರುಕಟ್ಟೆ ದರದಲ್ಲಿ ಕ್ರಯಕ್ಕೆ ಕ್ಲಬ್‌ಗೆ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

2001-2002ನೇ ಸಾಲಿನಲ್ಲಿ ಸಚಿವರುಗಳಿಗೆ ಪ್ರವಾಸ ಇತ್ಯಾದಿಗಳಿಗೆ ಖರ್ಚಾಗಿರುವ ಹಣ

335(207) - ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2001-2002ನೇ ಸಾಲಿನಲ್ಲಿ ರಾಜ್ಯ ಸಚಿವರ ಸಂಪುಟ ದರ್ಜೆ ಸಚಿವರುಗಳು ಹಾಗೂ ರಾಜ್ಯ ಸಚಿವರುಗಳು ಕೈಗೊಂಡ ರಾಜ್ಯದೊಳಗೆ ಹಾಗೂ ಹೊರಗಡೆ ಪ್ರವಾಸಕ್ಕಾಗಿ ಖರ್ಚಾಗಿರುವ ಪ್ರವಾಸಭತ್ಯೆಗಳ ವಿವರ ನೀಡುವುದು.

ಆ) ಮೇಲ್ಕಂಡ ಅವಧಿಯಲ್ಲಿ ಆಯಾ ಸಚಿವರುಗಳು ತಮ್ಮ ಕ್ಷೇತ್ರಕ್ಕೆ ಎಷ್ಟು ಬಾರಿ ಪ್ರವಾಸ ಕೈಗೊಂಡಿದ್ದಾರೆ.

ಇ) ಮೇಲ್ಕಂಡ ಅವಧಿಯಲ್ಲಿ ಆಯಾ ಸಚಿವರುಗಳು ತಮ್ಮ ಕೇತ್ರದಲ್ಲಿ ಕಳೆದ ದಿನಗಳೆಷ್ಟು ಹಾಗೂ ರಾಜ್ಯದ ಹೊರಗಡೆ ಪ್ರವಾಸದ ಕಳೆದ ದಿನಗಳೆಷ್ಟು?